ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 13.12.2024.

ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ. ಸಿ.ಎನ್.ಎಂ. ವಕೀಲರಿಂದ

1. 2 ನೇ ವಾದಿಯು ಬೆಂಗಳೂರಿನ ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು, 2, 3 ನೇ ವಾದಿಗಳು ಮತ್ತು ಪ್ರತಿವಾದಿಯ ನಡುವೆ ದಿನಾಂಕ 20.11.2000 ದಲ್ಲಿ ಪಂಚಾಯತಿ ಪಾಲು ಪಟ್ಟಿ ಮುಖಾಂತರ ದಾವಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಿಭಾಗದಲ್ಲಿ ಪ್ರತಿವಾದಿಗೆ ಸರ್ವೇ ನಂಬರ್ 12/4 ಇಪಿ-1 ರಲ್ಲಿ 25 ಗುಂಟೆ, ಸರ್ವೇ ನಂಬರ್ 13/1 ಪಿ-12 ರಲ್ಲಿ 26 ಗುಂಟೆ ಮತ್ತು ಸರ್ವೇ ನಂಬರ್ 9/10 ಪಿ3 ರಲ್ಲಿ 1 ಎಕರೆ ಜಮೀನುಗಳನ್ನು ಖಾತೆ ಮಾಡಿಸಿ ವಿಭಾಗ ಮುಖಾಂತರ ನೀಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗಳಾ 5 ರಿಂದ 7 ರವರ ವಿವಾಹವನ್ನು ಪ್ರತಿವಾದಿಯೇ ಮಾಡಿದ್ದು, ಸದರಿ ಸಾಲದ ಬಾಬ್ತುಗಾಗಿ ಹಾಗೂ ಅದನ್ನು ತೀರಿಸಲು ಮೇಲೆ ತಿಳಿಸಿದ ಆಸ್ತಿಗಳನ್ನು ಆತನ ಹೆಸರಿಗೆ ಖಾತೆ ಮಾಡಿಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 2 ರಲ್ಲಿ ಪ್ರತಿವಾದಿಯು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ವಾದಿ ನಂಬರ್ 4 ಮತ್ತು 5 ರವರ ವಯಸ್ಸನ್ನು ನ್ಯಾಯಾಲಯಕ್ಕೆ ಕಡಿಮೆ ತೋರಿಸಿರುತ್ತೇವೆ ಎಂದರೆ ಸರಿಯಲ್ಲ.

2. ದಾವಾ ಐಟಂ ನಂ. ಸಿ ಸರ್ವೇ ನಂಬರ್ 12/1 ಪಿ2 ರಲ್ಲಿ ವಿಸ್ತೀರ್ಣ 1 ಎಕರೆ 3 ಗುಂಟೆ ಸ್ವತ್ತು ನಮ್ಮ ಕುಟುಂಬಕ್ಕೆ ಹೇಗೆ ಬಂದಿತು ಎಂದರೆ ಸಾಕ್ಷಿಯು ಅದು ನನ್ನ ತಂದೆಯಿಂದ ಬಂದಿದೆ ಎಂದು ನುಡಿಯುತ್ತಾರೆ. ನನ್ನ ತಂದೆಯಾದ ಮರಿಗೌಡ ರವರಿಗೆ ದಾವಾ ಸಿ ಷೆಡ್ಯೂಲ್ ಖಾತೆಯನ್ನು ಲೋಕನಹಳ್ಳಿ ಗ್ರಾಮದ ಎಲ್.ಜಿ ಗೋವಿಂದೇಗೌಡನ ಮಕ್ಕಳಾದ ಎಲ್.ಜಿ. ಮಂಜುನಾಥ, ಎಲ್.ಜಿ. ವೇಂಕಟರಾಮು, ಎಲ್.ಜಿ, ನಾರಾಯಣಗೌಡ, ಎಲ್.ಜಿ. ನೀಲೆಗೌಡ ರವರ ಒಪ್ಪಿಗೆ ಮೇರೆಗೆ ಅನುಭವದಾರರಾಗಿದ್ದ ನನ್ನ ತಂದೆಯ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಖಾತೆ ಬದಲಾವಣೆ ಆಗಿರುವ ಸಂಗತಿ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾನು 7 ನೇ ತರಗತಿ ವರೆಗೆ ವ್ಯಾಸಾಂಗ ಮಾಡಿರುತ್ತೇನೆ. ದಾವಾ ಸ್ವತ್ತಿನ ಖಾತೆಗಳು ಯಾರ ಹೆಸರಿನಲ್ಲಿ ಇವೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

ದಾವಾ ದಾಖಲು ಮಾಡಲು ವಿಷಯ ಹಾಗೂ ದಾಖಲಾತಿಗಳನ್ನು ವಕೀಲರಿಗೆ ನಾನು ಮತ್ತು ನನ್ನ ಅಣ್ಣ/2 ನೇ ವಾದಿ ನೀಡಿರುತ್ತೇವೆ. 1 ಮತ್ತು 2 ನೇ ವಾದಿಗಳು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ನನ್ನ ತಂದೆಗೆ ತುಂಬಾ ವಯಸ್ಸಾಗಿದೆ ಎಂದು ನುಡಿಯುತ್ತಾರೆ.

ಮುಂದುವರೆದು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.